ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

3

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 05/08/2020

### ಗುಂಪಾಗಿ ಲಿಫ್ಟ್‌ನಲ್ಲಿ ಓಡಾಟ | ಎಲ್ಲೆಂದರಲ್ಲಿ ಮಾಸ್ಕ್ ಹಾಕದೆ ಹರಟೆ

# ಶಕ್ತಿ ಕೇಂದ್ರದಲ್ಲಿ ಕೊರೊನಾ ಜಾಗೃತಿ ನಾಪತ್ತೆ

**ವಿಕ ಸುದ್ದಿಲೋಕ** ಬೆಂಗಳೂರು 5/8/20

ಕೋವಿಡ್ ಅನ್‌ಲಾಕ್ ಪ್ರಕ್ರಿಯೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗುತ್ತಿದ್ದರೂ ವಿಧಾನಸೌಧ ಸೇರಿದಂತೆ ಆಡಳಿತದ ಶಕ್ತಿ ಕೇಂದ್ರ ಮಾತ್ರ ಕೊರೊನಾ ಜಾಡ್ಯದಿಂದ ಇನ್ನೂ ಚೇತರಿಸಿಕೊಂಡಿಲ್ಲ.

ವಿಧಾನಸೌಧ, ವಿಕಾಸಸೌಧ, ಎಂ.ಎಸ್.ಬಿಲ್ಡಿಂಗ್‌ನಲ್ಲಿ ಕೆಲಸ ಮಾಡುವ ವಿವಿಧ ಸಚಿವಾಲಯ ವ್ಯಾಪ್ತಿಯ ಸುಮಾರು 7 ಸಾವಿರ ಸಿಬ್ಬಂದಿ ಈಗ ಪ್ರತಿನಿತ್ಯ ಕರ್ತವ್ಯಕ್ಕೆ ಹಾಜರಾಗುತ್ತಿದ್ದರೂ ಆಡಳಿತ ವ್ಯವಸ್ಥೆ ಚುರುಕಾಗಿಲ್ಲ, ವ್ಯವಸ್ಥೆ ಪಾರ್ಶ್ವವಾಯು ಪೀಡಿತ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ.

ಅನ್‌ಲಾಕ್ ಪ್ರಕ್ರಿಯೆ ಜಾರಿಯಲ್ಲಿದ್ದರೂ ಸಿಬ್ಬಂದಿ ಕೊರೊನಾ ಭಯದಿಂದ ಹೊರಕ್ಕೆ ಬಂದಿಲ್ಲ, ಇದಕ್ಕೆ ಪೂರಕವೆಂಬಂತೆ ಶಕ್ತಿ ಸೌಧದಲ್ಲಿ ಪಾಸಿಟಿವ್ ಪ್ರಕರಣಗಳು ಕಾಣಿಸಿಕೊಳ್ಳುತ್ತಲೇ ಇದೆ. ಶಕ್ತಿ ಸೌಧದ ಸುತ್ತಮುತ್ತ ಲಕ್ಷಣ ರಹಿತ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ ಭಯದಲ್ಲೇ ಕೆಲಸ ಮಾಡುತ್ತಿರುವ ಸಿಬ್ಬಂದಿ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿಲ್ಲ, ಇದು ಆಡಳಿತ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿದೆ.

**ಮಂತ್ರಿಗಳ ಕಚೇರಿ** : ಸಚಿವರಾದ ಸಿ.ಟಿ. ರವಿ, ಆನಂದ್‌ಸಿಂಗ್, ಬಿ.ಸಿ.ಪಾಟೀಲ್ ಅವರಿಗೆ ಸೋಂಕು ದೃಢಪಟ್ಟಿದೆ. ತಮ್ಮ ಕಚೇರಿ ಸಿಬ್ಬಂದಿಗೆ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ.

**38 ಇಲಾಖೆ** : ರಾಜ್ಯ ಸರಕಾರಿ ಸಚಿವಾಲಯ ವ್ಯಾಪ್ತಿಯಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ನೌಕರರು ಕೆಲಸ ಮಾಡುತ್ತಾರೆ. ಶಕ್ತಿಸೌಧಗಳ ವ್ಯಾಪ್ತಿಯಲ್ಲಿನ 38 ಇಲಾಖೆಗಳಿಗೆ ಈ ಸಿಬ್ಬಂದಿ ಸೇರಿದ್ದಾರೆ. ಅತಿ ದೊಡ್ಡ ನೌಕರ ವರ್ಗ ಇದಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ವಾರದಲ್ಲಿ ಐದು ದಿನ ಮಾತ್ರ ಕೆಲಸ ಮಾಡುವುದಕ್ಕೆ ಇತ್ತೀಚೆಗೆ ಅವಕಾಶ ನೀಡಲಾಗಿತ್ತು. ಕೊರೊನಾ ಆರಂಭದ ದಿನದಲ್ಲಿ ಒಟ್ಟು ಸಾಮರ್ಥ್ಯದ ಶೇ.30ರಷ್ಟು ಸಿಬ್ಬಂದಿಗೆ ಮಾತ್ರ ಕಚೇರಿಗೆ ಬರಲು ಅವಕಾಶ ನೀಡಲಾಗಿತ್ತು. ಜತೆಗೆ ಕಂಟೈನ್ಮೆಂಟ್ ಪ್ರದೇಶದಲ್ಲಿ ವಾಸವಿರುವ ಸಿಬ್ಬಂದಿಗೆ ವರ್ಕ್ ಫ್ರಂ ಹೋಮ್ ಸೌಲಭ್ಯ ನೀಡಲಾಗಿತ್ತು. ಆದರೆ ಈಗ ಕೊರೊನಾ ಪ್ರಸರಣ ಪ್ರಮಾಣ ಹೆಚ್ಚುತ್ತಿದೆ. ಈಗ ಈ ಎಲ್ಲ ಸೌಲಭ್ಯಗಳಿಗೆ ಕತ್ತರಿ ಬಿದ್ದಿದೆ. ಇದು ನೌಕರರಲ್ಲಿ ಆತಂಕ ಸೃಷ್ಟಿಸಿದೆ.



**ಶಕ್ತಿಸೌಧದ ನೌಕರರು**

| | |
|---|---|
| 5000 | ರಾಜ್ಯ ಸರಕಾರಿ ಸಚಿವಾಲಯ |
| 1000 | ವಿಧಾನಸಭೆ ಸಚಿವಾಲಯ |
| 500 | ವಿಧಾನ ಪರಿಷತ್ ಸಚಿವಾಲಯ |
| 500 | ವಿಧಾನ ಪರಿಷತ್ ಸಚಿವಾಲಯ |

**ಸಾಮಾಜಿಕ ಅಂತರವೆಲ್ಲ ಮಾಯ**

ನಾಗರಿಕರಿಗೆ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಿಕೆ, ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಕೆ, ಅನಗತ್ಯ ಓಡಾಟ ಬೇಡ ಎಂದು ಸರಕಾರ ಪಾಠ ಹೇಳುತ್ತಿದೆ. ಆದರೆ ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಕೆಲಸ ಮಾಡುವ ಸಿಬ್ಬಂದಿ ಇದಕ್ಕೆ ವ್ಯತಿರಿಕ್ತವಾಗಿಯೇ ವರ್ತಿಸುತ್ತಿದ್ದಾರೆ. ಯಾವುದೇ ಅಂತರ ಕಾಪಾಡಿಕೊಳ್ಳದೇ ಹರಟೆ ಹೊಡೆಯುತ್ತಾ ಓಡಾಡುವುದು ಶಕ್ತಿ ಸೌಧದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಅಗತ್ಯವಿಲ್ಲದೇ ಇದ್ದರೂ ಗುಂಪಾಗಿ ಲಿಫ್ಟ್‌ನಲ್ಲಿ ಓಡಾಡಲಾಗುತ್ತಿದೆ. ವಿಧಾನಸೌಧಕ್ಕೆ ಪ್ರವೇಶಿಸುವ ನಾಗರಿಕರಿಗೆ ಮಾತ್ರ ಇಂಥ ನಿರ್ಬಂಧಗಳು ಕಡ್ಡಾಯವೇ ವಿನಃ ಇಲ್ಲಿನ ಜವಾಬ್ದಾರಿಯುತ ನೌಕರರಿಗಲ್ಲ ಎಂಬ ವ್ಯಂಗ್ಯ ಕೇಳಿ ಬಂದಿದೆ.